ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE :

## ಮೋದಿ ಬಳಿ ಸ್ವಂತ ವಾಹನವಿಲ್ಲ | ಯಾವುದೇ ಸಾಲವನ್ನೂ ಹೊಂದಿಲ್ಲ

# ಪ್ರಧಾನಿ ಆದಾಯ 36 ಲಕ್ಷ ರೂ. ಹೆಚ್ಚಳ

**ಹೊಸದಿಲ್ಲಿ:** ಪ್ರಧಾನಿ ನರೇಂದ್ರ ಮೋದಿ ಅವರ ವಾರ್ಷಿಕ ಆದಾಯದಲ್ಲಿ 36 ಲಕ್ಷ ರೂ.ಗಳ ಹೆಚ್ಚಳ ದಾಖಲಾಗಿದೆ. ಹೂಡಿಕೆ ವಿಧಾನ ಎಷ್ಟೇ ಸಾಂಪ್ರದಾಯಿಕವಾಗಿದ್ದರೂ ಉತ್ತಮ ಹಣಕಾಸು ಯೋಜನೆ ರೂಪಿಸಿದರೆ ಗಣನೀಯ ಪ್ರಮಾಣದ ಲಾಭ ಗಳಿಕೆ ಸಾಧ್ಯ ಎನ್ನುವುದನ್ನು ಪ್ರಧಾನಿ ತೋರಿಸಿಕೊಟ್ಟಿದ್ದಾರೆ.

ನರೇಂದ್ರ ಮೋದಿ ಅವರ ಸ್ಥಿರ-ಚರ ಆಸ್ತಿಗಳ ವಿವರಗಳನ್ನು ಪ್ರಧಾನಿ ಕಚೇರಿ ಘೋಷಣೆ ಮಾಡಿದೆ. 2019ರಲ್ಲಿ 2.49 ಕೋಟಿ ರೂ. ಇದ್ದ ಅವರ ಒಟ್ಟು ಆಸ್ತಿಯಲ್ಲಿ 2020, ಜೂನ್ 30ರ ವೇಳೆಗೆ 2.85 ಕೋಟಿ ರೂ.ಗೆ ಏರಿಕೆಯಾಗಿದೆ. ಸುಮಾರು 3.3 ಲಕ್ಷ ರೂ.ಗಳ ಬ್ಯಾಂಕ್ ಠೇವಣಿ ಮತ್ತು 2019 ರಲ್ಲಿ 33 ಲಕ್ಷ ರೂ.ಗಳ ಸುರಕ್ಷಿತ ಹೂಡಿಕೆಯ ಆದಾಯದಿಂದಾಗಿ ಮೋದಿ ಅವರ ಆಸ್ತಿ ಗಳಿಕೆಯಲ್ಲಿ ಹೆಚ್ಚಳ ದಾಖಲಾಗಿದೆ. ಇದರಲ್ಲಿ 1.75 ಕೋಟಿ ರೂ. ಚರಾಸ್ತಿ ಇದೆ. ಪ್ರಧಾನಿ ಹೆಸರಿನಲ್ಲಿ ಯಾವುದೇ ಸಾಲ ಇಲ್ಲ. ಸ್ವಂತ ವಾಹನವೂ ಇಲ್ಲ. ನಾಲ್ಕು ಚಿನ್ನದ ಉಂಗುರಗಳಿವೆ. ಅಂದಾಜು 45 ಗ್ರಾಮ್ ತೂಕದ ಅವುಗಳ ಮೌಲ್ಯ 1.5 ಲಕ್ಷ ರೂ. ಗಾಂಧಿನಗರ ಸೆಕ್ಟರ್-1ರಲ್ಲಿ ಜಂಟಿ ಮಾಲಿಕತ್ವದಲ್ಲಿ 3,531 ಚದರ ಅಡಿಯ ಒಂದು ಫ್ಲ್ಯಾಟ್ ಇದೆ.

ಪಿಎಂ ಮೋದಿ ಅವರ ಬಳಿ 31,450 ರೂ. ನಗದು ಇದೆ. ಬ್ಯಾಂಕ್ ಖಾತೆಯಲ್ಲಿ 3,38,173 ರೂ. ಶಿಲ್ಕು ಮತ್ತು ಎಸ್‌ಬಿಐನ ಗಾಂಧಿನಗರ ಎನ್‌ಎಸ್‌ಸಿ ಶಾಖೆಯಲ್ಲಿ ಸ್ಥಿರ ಠೇವಣಿ ಮತ್ತು ಎಂಒಡಿ ಬ್ಯಾಲೆನ್ಸ್ ರೂಪದಲ್ಲಿ 1,60,28,939 ರೂ. ಹೊಂದಿದ್ದಾರೆ. ಪ್ರಧಾನಿಯವರು 8,43,124 ರೂ. ರಾಷ್ಟ್ರೀಯ ಉಳಿತಾಯ ಪತ್ರ ಹೊಂದಿದ್ದು, ಇದು ಅವರಿಗೆ ವಾರ್ಷಿಕ ಶೇ.6.8 ಬಡ್ಡಿ ದರದಲ್ಲಿ ಉತ್ತಮ ಆದಾಯ ತಂದುಕೊಟ್ಟಿದೆ. ಎನ್‌ಎಸ್‌ಸಿ ಹೂಡಿಕೆಯು ತೆರಿಗೆ ವಿನಾಯಿತಿ ಲಾಭಕ್ಕೂ ಕಾರಣವಾಗಿದೆ.

### ಪ್ರಧಾನಿ ಹೂಡಿಕೆಯ 4 ಸೂತ್ರ



**1.** ಅಂಚೆ ಕಚೇರಿ ರಾಷ್ಟ್ರೀಯ ಉಳಿತಾಯ ಪತ್ರ- 8,43,124 ರೂ. ಹೂಡಿಕೆ ಮಾಡಿದ್ದಾರೆ. ವಾರ್ಷಿಕ ಶೇ.6.8 ಬಡ್ಡಿ ದರ.

**2.** ಜೀವ ವಿಮೆ- ಮೋದಿಯವರು ವಾರ್ಷಿಕ 1,50,957 ರೂ. ಕಂತು ಕಟ್ಟುತ್ತಾರೆ. ಜೀವ ವಿಮೆ ಖಚಿತ ಆದಾಯ ತಂದುಕೊಡಬಲ್ಲ ಉತ್ತಮ ಹೂಡಿಕೆಯಾಗಿದೆ.

**3.** ಮೂಲಸೌಕರ್ಯ ಬಾಂಡ್- ಸರಕಾರದ ಮೂಲಸೌಕರ್ಯ ಬಾಂಡ್‌ಗಳಲ್ಲಿ ಪ್ರಧಾನಿ 20,000 ರೂ. ಹೂಡಿಕೆ ಮಾಡಿದ್ದಾರೆ. ಗರಿಷ್ಠ 20,000 ರೂ. ತೆರಿಗೆ ವಿನಾಯಿತಿಯನ್ನೂ ಈ ಬಾಂಡ್‌ಗಳ ಮೂಲಕ ಪಡೆಯಬಹುದು.

**4.** ನಿಶ್ಚಿತ ಠೇವಣಿ- ಸದ್ಯದ ಪರಿಸ್ಥಿತಿಯಲ್ಲಿ ಇದು ಕಡಿಮೆ ಆದಾಯ ತಂದುಕೊಡುವ ಹೂಡಿಕೆ. ಆದರೆ ಸಂಪೂರ್ಣ ಸುರಕ್ಷಿತ. ಹೀಗಾಗಿ ಪ್ರಧಾನಿ ಗರಿಷ್ಠ ಮೊತ್ತವನ್ನು ಠೇವಣಿಗಳಲ್ಲಿ ಹೂಡಿಕೆ ಮಾಡಿದ್ದಾರೆ.